## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 1809 |
| ಸದಸ್ಯರ ಹೆಸರು | : | ಶ್ರೀಮತಿ ಹೇಮಲತಾ ನಾಯಕ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 23.03.2026 |
| ಉತ್ತರಿಸುವ ಸಚಿವರು | : | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. |

| ಕ್ರ. ಸಂ | ಪ್ರಶ್ನೆಗಳು | ಉತ್ತರ |
|---|---|---|
| (ಅ) | 2023-24ನೇ ಸಾಲಿನಿಂದ 2025-26ನೇ ಸಾಲಿನವರೆಗೆ ಕಲ್ಯಾಣ ಕರ್ನಾಟಕ ಪ್ರದೇಶಗಳಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳು (PHC) ಸಮುದಾಯ ಆರೋಗ್ಯ ಕೇಂದ್ರಗಳು (CHC) ಮತ್ತು ಜಿಲ್ಲಾ ಆಸ್ಪತ್ರೆಗಳಲ್ಲಿ ಔಷಧಗಳನ್ನು ಖರೀದಿಲು ಎಷ್ಟು ಅನುದಾನವನ್ನು ಖರ್ಚು ಮಾಡಲಾಗಿದೆ (ವರ್ಷಾವಾರು ವಿವರಗಳನ್ನು ಒದಗಿಸುವುದು) | 2023-24ನೇ ಸಾಲಿನಿಂದ 2025-26ನೇ ಸಾಲಿನವರೆಗೆ ಕಲ್ಯಾಣ ಕರ್ನಾಟಕ ಪ್ರದೇಶಗಳಿಗೆ KSMSCL ಸಂಸ್ಥೆಯಿಂದ ಖರೀದಿ ಮಾಡಿ ಜಿಲ್ಲಾ ಔಷಧ ಉಗ್ರಾಣಗಳಿಗೆ ಸರಬರಾಜು ಮಾಡಲಾಗಿದೆ.<br><br>2023-24ನೇ ಸಾಲಿನಿಂದ 2025-26ನೇ ಸಾಲಿನವರೆಗೆ ಕಲ್ಯಾಣ ಕರ್ನಾಟಕ ಪ್ರದೇಶಗಳಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು ಹಾಗೂ ಜಿಲ್ಲಾಸ್ಪತ್ರೆಗಳಿಗೆ ಪೂರೈಕೆ ಮಾಡಲಾದ ಔಷಧಿಗಳ ಮೌಲ್ಯದ ವಿವರಗಳನ್ನು **ಅನುಬಂಧ**ದಲ್ಲಿ ನೀಡಲಾಗಿದೆ. |

**PHC, CHC ಹಾಗೂ TLH ಆಸ್ಪತ್ರೆಗಳಿಗೆ ಪೂರೈಸಲಾದ ಔಷಧಿಗಳ ಸಂಖ್ಯೆ ಹಾಗೂ ಮೌಲ್ಯದ ವಿವರ**

| District Name | 2023-24 | | 2024-25 | | 2025-26 (Upto 15-Mar-26) | |
|---|---|---|---|---|---|---|
| | No of Drugs | Values(Rs) | No of Drugs | Values(Rs) | No of Drugs | Values(Rs) |
| BALLARI | 378 | 6,63,89,047 | 484 | 10,63,75,526 | 375 | 6,40,60,232 |
| BIDAR | 394 | 4,97,18,221 | 475 | 5,59,47,840 | 335 | 3,53,64,745 |
| KALABURGI | 384 | 8,82,29,224 | 489 | 12,80,99,500 | 320 | 7,73,28,704 |
| KOPPAL | 410 | 7,29,26,925 | 484 | 9,18,28,953 | 421 | 6,38,87,804 |
| RAICHUR | 384 | 5,92,67,657 | 496 | 7,40,48,238 | 408 | 5,63,61,192 |
| VIJAYANAGARA | 376 | 7,55,14,475 | 488 | 10,27,00,373 | 326 | 5,46,95,295 |
| YADGIRI | 397 | 3,83,15,095 | 500 | 4,71,74,505 | 324 | 2,45,08,976 |

| ಕ್ರ. ಸಂ | ಪ್ರಶ್ನೆಗಳು | ಉತ್ತರ |
|---|---|---|
| (ಆ) | ಈ ಭಾಗದಲ್ಲಿ ಕಳೆದ ಕೆಲವು ತಿಂಗಳುಗಳಿಂದ, ಜೀವರಕ್ಷಕ ಹಾಗೂ ಅತ್ಯಗತ್ಯ ಔಷಧಿಗಳ ಖರೀದಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿರುತ್ತದೆ. |

| | |
|---|---|
| (ಇ) ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮವು (KSMSCL) ಔಷಧಿಗಳು ಖರೀದಿ ಪ್ರಕ್ರಿಯೆಯಲ್ಲಿ (Procurement Procedure) ವಿಳಂಬ ಮಾಡುತ್ತಿರುವುದು ಮತ್ತು ಖರೀದಿ ನಿಯಮಗಳನ್ನು ಉಲ್ಲಂಘಿಸುತ್ತಿರುವುದು ಆಸ್ಪತ್ರೆಗಳಲ್ಲಿನ ಈ ಔಷಧಿಗಳ ಅಭಾವಕ್ಕೆ ಕಾರಣವಲ್ಲವೆ: (ಕಳೆದ ಒಂದು ವರ್ಷದಲ್ಲಿ ಔಷಧಿಗಳಿಗಾಗಿ ಮೀಸಲಿಟ್ಟ ಅನುದಾನ ಮತ್ತು ವ್ಯಯಿಸಲಾದ ಮೊತ್ತದ ವಿವರ ನೀಡುವುದು) | • ರಾಜ್ಯದ ಸರ್ಕಾರಿ ಆರೋಗ್ಯ ಸಂಸ್ಥೆಗಳಿಗೆ ಅಗತ್ಯವಿರುವ ಔಷಧಿಗಳ ಪಟ್ಟಿಯನ್ನು National List of Essential Medicines (NLEM) ಹಾಗೂ Indian Public Health Standards (IPHS) ಮಾರ್ಗಸೂಚಿಗಳ ಆಧಾರದ ಮೇಲೆ ಸಮಗ್ರವಾಗಿ ಪರಿಶೀಲಿಸಲಾಗಿದೆ. ಜೊತೆಗೆ ಇತರೆ ರಾಜ್ಯಗಳ ಔಷಧ ಖರೀದಿ ಪಟ್ಟಿಗಳೊಂದಿಗೆ ಹೋಲಿಕೆ ನಡೆಸಿ, ಬಳಕೆಯಿಂದ ಹೊರಗುಳಿದ ಅಥವಾ ಅನಾವಶ್ಯಕ ಔಷಧಿಗಳನ್ನು ಪಟ್ಟಿಯಿಂದ ತೆಗೆದುಹಾಕಲಾಗಿದೆ. ಪ್ರಸ್ತುತ ಚಿಕಿತ್ಸಾ ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು ಹೊಸ ಔಷಧಿಗಳನ್ನು ಸೇರಿಸಲಾಗಿದೆ. ವಿಶೇಷವಾಗಿ ವಿವಿಧ ವಿಧದ ರಾಜ್ಯ ಸರ್ಕಾರದ ಔಷಧ ಉಗ್ರಾಣ ಮತ್ತು ಸರ್ಕಾರಿ ಆಸ್ಪತ್ರೆಗಳಿಗೆ ಔಷಧಗಳನ್ನು ಪೂರೈಸಲು 2025-26ನೇ ಸಾಲಿನ ಔಷಧ ಖರೀದಿ ಪ್ರಕ್ರಿಯೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ ಆಕುಕ 129 ಎಫ್.ಪಿ.ಆರ್ 2025 ದಿನಾಂಕ:01.08.2025 ಮತ್ತು ದಿನಾಂಕ 04-08-2025 ರನ್ವಯ, ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ತಾಲ್ಲೂಕು ಆಸ್ಪತ್ರೆ, ಜಿಲ್ಲಾ ಆಸ್ಪತ್ರೆ ಹಾಗೂ ಇತರೆ ಸರ್ಕಾರಿ ಆರೋಗ್ಯ ಸಂಸ್ಥೆಗಳಿಗೆ ಅಗತ್ಯವಿರುವ 890 ವಿಧಗಳ ಔಷಧಿಗಳನ್ನು KSMSCL ಮೂಲಕ ಖರೀದಿಸಲು ರೂ. 880.68 ಕೋಟಿಯನ್ನು ಮಂಜೂರು ಮಾಡಲಾಗಿದೆ.<br>• ಸರ್ಕಾರದ ಆದೇಶದನ್ವಯ KSMSCL ಸಂಸ್ಥೆಯಿಂದ 534 ಔಷಧಿಗಳನ್ನು ಟೆಂಡರ್ ಪ್ರಕ್ರಿಯೆಯ ಮೂಲಕ ಖರೀದಿಸಲು ನಿರ್ಧರಿಸಲಾಗಿದೆ ಹಾಗೂ ಉಳಿದ 356 ಕಡಿಮೆ ಮೌಲ್ಯದ ಔಷಧಿಗಳನ್ನು ಪ್ರಚಲಿತ ನಿಯಮಾನುಸಾರ ಸ್ಥಳೀಯ ಖರೀದಿ ವಿಧಾನಗಳ ಮೂಲಕ ಖರೀದಿಸಲು ನಿರ್ಧರಿಸಲಾಗಿದೆ.<br>• KSMSCL ಸಂಸ್ಥೆಯಿಂದ 2025–26ನೇ ಸಾಲಿನಲ್ಲಿ ಒಟ್ಟು 534 ಔಷಧಿಗಳಲ್ಲಿ ಆದ್ಯತೆ ಆಧಾರದ ಮೇಲೆ Priority-1 ಮತ್ತು Priority-2 ಪ್ಯಾಕೇಜುಗಳಲ್ಲಿರುವ 496 ಔಷಧಿಗಳ ಖರೀದಿ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದ್ದು, ಉಳಿದ 38 ಔಷಧಿಗಳು Priority-3 Packageಗೆ ಸೇರಿದ್ದು, ಅವುಗಳ ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದೆ.<br><br>ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ (KSMSCL) ಸಂಸ್ಥೆಯು KTPP ಕಾಯ್ದೆ 1999 ಹಾಗೂ KTPP ನಿಯಮ 2000 ಗಳ ನಿಯಮಗಳನ್ನು ಖರೀದಿ ಪ್ರಕ್ರಿಯೆಯಲ್ಲಿ (Procurement procedure) ಪಾಲಿಸಿ ಯಾವುದೇ ಖರೀದಿ ನಿಯಮಗಳನ್ನು ಉಲ್ಲಂಘಿಸದೇ ಕಾಲಮಿತಿಯಲ್ಲಿ ಪೂರ್ಣಗೊಳಿಸಲು ಕ್ರಮಕೈಗೊಳ್ಳಲಾಗಿರುತ್ತದೆ. |

**ಟೆಂಡರ್ ಪ್ರಕ್ರಿಯೆಯ ಸಂಕ್ಷಿಪ್ತ ವಿವರಣೆ ಈ ಕೆಳಕಂಡಂತಿದೆ:**

- Package wise ಔಷಧಗಳಿಗೆ ಟೆಂಡರ್ ದಸ್ತಾವೇಜುಗಳನ್ನು ತಯಾರಿಸಿ KTPP Portal ನಲ್ಲಿ ಪ್ರಕಟಣೆಗೊಳಿಸುವುದು.
- ಟೆಂಡರ್ ಆಹ್ವಾನಿಸಿದ ದಿನಾಂಕದಿಂದ ತಾಂತ್ರಿಕ ಬಿಡ್ ತೆರೆಯಲು ಕನಿಷ್ಠ 30 ದಿನಗಳ ಸಮಯಾವಕಾಶ ಇರುತ್ತದೆ.
- ಸದರಿ ಟೆಂಡರ್‌ಗಳಲ್ಲಿ ಭಾಗವಹಿಸಿದ ಬಿಡ್‌ದಾರರು ಸಲ್ಲಿಸಿದ ಟೆಂಡರ್ ದಸ್ತಾವೇಜುಗಳನ್ನು ಕ್ರಮವಾಗಿ ನಿಯಮಾನುಸಾರ ಮೌಲ್ಯಮಾಪನಗೊಳಿಸಲು ಅಂದಾಜು 10-15 ದಿನಗಳ ಸಮಯದ ಅವಶ್ಯಕತೆ ಇರುತ್ತದೆ.
- ಮೌಲ್ಯಮಾಪನ ಪೂರ್ಣಗೊಳಿಸಿ ಟೆಂಡರ್ ಮೌಲ್ಯಮಾಪನ ಸಭೆಯಲ್ಲಿ ನಿರ್ಧರಿಸಿದಂತೆ ಆರ್ಥಿಕ ಬಿಡ್ ತೆರೆದು ನಂತರ ಸಲ್ಲಿಸಿರುವ ದರ ಹಾಗೂ ಅಂದಾಜು ದರ ಮತ್ತು ಇತರೆ ಲಭ್ಯವಿರುವ ದರಗಳನ್ನು ಹೋಲಿಸಿ TAC Agenda ವನ್ನು ತಯಾರಿಸಿ ಟೆಂಡರ್ ಅಂಗೀಕಾರ ಸಮಿತಿ ಸಭೆ ನಡೆಸಲು ಕ್ರಮವಹಿಸಲಾಗುತ್ತದೆ.
- ಟೆಂಡರ್ ಅಂಗೀಕಾರ ಸಮಿತಿ ಸಭೆ ನಡೆಸಿ ಅಗತ್ಯವಿದ್ದಲ್ಲಿ KPPP portal ಮೂಲಕ ದರ ಸಂಧಾನ ನಡೆಸಿ ತದನಂತರ ಟೆಂಡರ್ ಅಂಗೀಕಾರ ಸಭೆಯಲಿ ಮಂಡಿಸಿ ಚರ್ಚಿಸಿ ದರಗಳನ್ನು ಅಂತಿಮಗೊಳಿಸಲಾಗುತ್ತದೆ. ಸದರಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಸಮಯದ ಅವಶ್ಯಕತೆ ಇರುತ್ತದೆ.
- ಟೆಂಡರ್ ಅಂಗೀಕಾರ ಸಮಿತಿ ಸಭೆ ನಿರ್ಣಯದಂತೆ L1 ಬಿಡ್‌ದಾರರಿಗೆ Notification of Award ನೀಡಿ ಸಂಸ್ಥೆಯ ಭದ್ರತಾ ಠೇವಣಿ ಮತ್ತು ಕರಾರು ಒಪ್ಪಂದ ಪತ್ರವನ್ನು ಸಲ್ಲಿಸಲು ಕನಿಷ್ಠ 21 ದಿನಗಳ ಕಾಲವಕಾಶವಿರುತ್ತದೆ.
- L1 ಬಿಡ್‌ದಾರರು ಸಲ್ಲಿಸಿರುವ ಭದ್ರತಾ ಠೇವಣಿ ಮತ್ತು ಕರಾರು ಒಪ್ಪಂದ ಪತ್ರವನ್ನು ಸಲ್ಲಿಸಿದ ತಕ್ಷಣವೇ ಕ್ರಮವಹಿಸಿ ಸಂಬಂಧಿತ ಸಂಸ್ಥೆಗಳಿಗೆ ಖರೀದಿ ಆದೇಶಗಳನ್ನು ನೀಡಲಾಗುತ್ತದೆ.
- ಖರೀದಿ ಆದೇಶಗಳನ್ನು ಪಡೆದ ಸಂಬಂಧಿತ ಸಂಸ್ಥೆಗಳಿಗೆ ಅಂದಾಜು 45 ರಿಂದ 70 ದಿನಗಳವರೆಗೆ (45days for Tablets, surgicals, Medical devices, etc & 70 days for Injectables including IV fluids) ಔಷಧಗಳನ್ನು ಜಿಲ್ಲಾ ಔಷಧ ಉಗ್ರಾಣಗಳಿಗೆ ಪೂರೈಸಲು ಕಾಲವಕಾಶ ಇರುತ್ತದೆ.
- ಜಿಲ್ಲಾ ಔಷಧ ಉಗ್ರಾಣಗಳಿಗೆ ಸರಬರಾಜುಗೊಂಡ ಔಷಧಗಳನ್ನು ನಿಯಮಗಳಂತೆ Quarntine ಗೆ ಒಳಪಡಿಸಲಾಗಿ ಗುಣವಿಶ್ಲೇಷಣೆ ಪಡೆದ ನಂತರ ಸಂಬಂಧಿತ ಆರೋಗ್ಯ ಸಂಸ್ಥೆಗಳಿಗೆ ಗುಣಮಟ್ಟದ ಔಷಧಗಳನ್ನು (Standard Quality) ವಿತರಿಸಲಾಗುತ್ತದೆ.

ಸದರಿ ಪ್ರಕ್ರಿಯೆಯು ಪೂರ್ಣಗೊಳಿಸಲು ಅಂದಾಜು 30 ದಿನಗಳ ಕಾಲವಕಾಶ ಬೇಕಾಗುತ್ತದೆ.

ಆದುದರಿಂದ, ಖರೀದಿ ಪ್ರಕ್ರಿಯೆ ಪ್ರಾರಂಭಿಸಿ ಮತ್ತು ಪೂರ್ಣಗೊಳಿಸಿ ನಂತರ ಕಾರ್ಯದೇಶಗಳನ್ನು ನೀಡಿ ಸರಬರಾಜುದಾರರಿಂದ ಪಡೆದು ಔಷಧಗಳನ್ನು ಉಗ್ರಾಣಗಳಿಂದ ಆರೋಗ್ಯ ಸಂಸ್ಥೆಗಳಿಗೆ ಸರಬರಾಜು ಪೂರ್ಣಗೊಳಿಸಲು ಕಾಲಾವಕಾಶ ಬೇಕಾಗಿರುತ್ತದೆ.

**ಪ್ರಸ್ತುತ ಕೆ.ಎಸ್.ಎಂ.ಎಸ್.ಸಿ.ಎಲ್.ಸಂಸ್ಥೆಯಿಂದ ಟೆಂಡರ್ ಆಹ್ವಾನಿಸಿರುವ 496 ಔಷಧಗಳ ವಿವರ ಈ ಕೆಳಕಂಡಂತಿದೆ.**

| ಕ್ರ.ಸಂ | ವಿವರಣೆ | ಔಷಧಿಗಳ ಸಂಖ್ಯೆ |
|---|---|---|
| 1. | KSMSCL ಮೂಲಕ ಫ್ಲೋಟ್ ಮಾಡಿದ ಟೆಂಡರ್‌ಗಳು<br>(ದಿನಾಂಕ 25.11.25 ರಂತೆ): | 496 Drugs |
| 2. | ವಿತರಿಸಲಾದ NOA ಗಳ ಒಟ್ಟು ಸಂಖ್ಯೆ: | 155 Drugs |
| 3. | ವಿತರಿಸಲಾದ PO ಗಳ ಒಟ್ಟು ಸಂಖ್ಯೆ: | 77 Drugs |
| 4. | ಟೆಂಡರ್ ಪ್ರಕ್ರಿಯೆಯಲ್ಲಿ ವಿವಿಧ ಹಂತಗಳಲ್ಲಿ ಇರುವ ಔಷಧಿಗಳು | 216 Drugs |
| 5. | ಮರುಟೆಂಡರ್ ಮಾಡಬೇಕಾಗಿರುವ ಔಷಧಗಳು | 125 Drugs |

125 ಔಷಧಿಗಳಿಗೆ Zero ಮತ್ತು Non Responsive ಬಿಡ್ ಸ್ವೀಕೃತಿಯಾಗಿದ್ದು, Potential ಬಿಡ್ದಾರರೊಂದಿಗೆ ಸಂಧಾನ ನಡೆಸಿ, ಔಷಧಗಳನ್ನು ಮರುಟೆಂಡರ್ ಆಹ್ವಾನಿಸಲು ಕ್ರಮಕೈಗೊಳ್ಳಲಾಗುತ್ತಿದೆ.

**2025-26ನೇ ಸಾಲಿನ ಔಷಧಗಳ ಖರೀದಿಗೆ ಮೀಸಲಿಟ್ಟ ಅನುದಾನದ ವಿವರ:-**

ರಾಜ್ಯ ಸರ್ಕಾರದ ಔಷಧ ಉಗ್ರಾಣ ಮತ್ತು ಸರ್ಕಾರಿ ಆಸ್ಪತ್ರೆಗಳಿಗೆ ಔಷಧಗಳ ಸಂಗ್ರಹಣೆ ಪೂರೈಸಲು 2025-26ನೇ

| | | |
|---|---|---|
| | | ಸಾಲಿನ ಔಷಧ ಖರೀದಿ ಪ್ರಕ್ರಿಯೆಯಲ್ಲಿ ರಾಜ್ಯ ಸರ್ಕಾರದ ಆದೇಶ ಸಂಖ್ಯೆ ಆಕುಕ 129 ಎಫ್.ಪಿ.ಆರ್ 2025, ದಿನಾಂಕ 04-08-2025ರ ಆದೇಶದನ್ವಯ KSMSCL ಸಂಸ್ಥೆಯಿಂದ 534 ಔಷಧಗಳನ್ನು ಟೆಂಡರ್ ಪ್ರಕ್ರಿಯೆಯ ಮೂಲಕ ಖರೀದಿಸಲು ನಿರ್ಧರಿಸಲಾಗಿರುತ್ತದೆ. ಈ ಔಷಧಗಳ ಖರೀದಿಗೆ ಮೀಸಲಿಟ್ಟ ಅನುದಾನ ರೂ. 880.68 ಕೋಟಿಗಳಾಗಿರುತ್ತದೆ.<br><br>ಅದರಂತೆ, KSMSCL ಸಂಸ್ಥೆಯು, ಒಟ್ಟು 38 ಟೆಂಡರ್ ಗಳನ್ನು ಆಹ್ವಾನಿಸಿ ಒಟ್ಟು 20 ಟೆಂಡರ್ ಗಳನ್ನು ಪೂರ್ಣಗೊಳಿಸಿ 155 Notification of Award ನೀಡಲಾಗಿ ಒಟ್ಟು ರೂ.**205.75** ಕೋಟಿ Committed (ಬಳಕೆ) ಮೊತ್ತದ ಅನುದಾನವಾಗಿರುತ್ತದೆ. |
| (ಈ) | ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಿಗಳು ಲಭ್ಯವಿಲ್ಲದ ಕಾರಣ ಬಡ ರೋಗಿಗಳು ಅನಿವಾರ್ಯವಾಗಿ ಹೊರಗಿನ ಖಾಸಗಿ ಮೆಡಿಕಲ್ ಔಷಧದ ಅಂಗಡಿಗಳು ಹೆಚ್ಚಿನ ಬೆಲೆಗೆ ಔಷಧಿಗಳನ್ನು ಖರೀದಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದು ಉಚಿತ ಆರೋಗ್ಯ ಸೇವೆಯ ವೈಫಲ್ಯವಲ್ಲವೇ; | ಸರ್ಕಾರಿ ಆಸ್ಪತ್ರೆಗಳಲ್ಲಿ ಅಗತ್ಯ ಔಷಧಿಗಳನ್ನು ಸಂಗ್ರಹಿಸಲು ಎಲ್ಲಾ ಹಂತದ ಆರೋಗ್ಯ ಕೇಂದ್ರಗಳಲ್ಲಿ AbArK ಹಾಗೂ ARS ಅನುದಾನಗಳನ್ನು ಬಳಸಿಕೊಂಡು ಖರೀದಿಸ ಬಹುದಾಗಿರುತ್ತದೆ.<br><br>ಮುಂದಿನ ದಿನಗಳಲ್ಲಿ ಔಷಧಿ ಕೊರತೆ ಉಂಟಾಗದಂತೆ ವಹಿಸಲಾದ ಕ್ರಮಗಳು ಕೆಳಕಂಡಂತಿವೆ.<br><br>1. ವಾರ್ಷಿಕ ಇಂಡೆಂಟ್ ಔಷಧಿಗಳ ಖರೀದಿ ಪ್ರಸ್ತಾವವನ್ನು ಅಂದಾಜು ಮೌಲ್ಯ ರೂ.880.68 ಕೋಟಿ ಯಂತೆ ಸರ್ಕಾರದ ಆದೇಶ ಸಂಖ್ಯೆ:ಆಕುಕ 129 ಎಫ್ ಪಿ ಆರ್ 2025, ದಿನಾಂಕ:1.08.2025 ರಂತೆ ಬಹುತೇಕ ಅಗತ್ಯ ಔಷಧಿಗಳನ್ನು KSMSCL ವತಿಯಿಂದ ತ್ವರಿತವಾಗಿ ಖರೀದಿಸಿ ವಿತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br><br>2. ಸರ್ಕಾರದ ಆದೇಶ ಸಂಖ್ಯೆ:ಆಕುಕ 33 ಎಫ್ ಪಿ ಎಸ್ 2026, ದಿನಾಂಕ:18.02.2026. ರಂತೆ ತಾತ್ಕಾಲಿಕವಾಗಿ ಎರಡು ತಿಂಗಳ ಅವಧಿಗೆ ರೂ.3,000.00ಲಕ್ಷಗಳ ಅನುದಾನವನ್ನು ಜಿಲ್ಲೆಗಳಲ್ಲಿ ಹಾಗೂ ಸ್ಥಳೀಯವಾಗಿ ಅಗತ್ಯ ಔಷಧಿಗಳನ್ನು ಖರೀದಿಸಿ ಬಳಸಲು ಅನುಮತಿ ನೀಡಿರುತ್ತದೆ.<br><br>**ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತ ಔಷಧಿಗಳನ್ನು ಒದಗಿಸಲು,** KSMSCL ಸಂಸ್ಥೆಯಿಂದ 2025–26ನೇ ಸಾಲಿನಲ್ಲಿ ಒಟ್ಟು **534** ಔಷಧಿಗಳಿಗೆ ಟೆಂಡರ್ ಆಹ್ವಾನಿಸಲಾಗಿದ್ದು, ಅವುಗಳಲ್ಲಿ 496 ಔಷಧಗಳ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. |
| (ಉ) | ಸರ್ಕಾರಿ ಆಸ್ಪತ್ರೆಗಳಲ್ಲಿ 100% ಔಷಧಿಗಳ ಲಭ್ಯತೆಯನ್ನು ಖಚಿತಪಡಿಸಲು ಮತ್ತು ಬಡ ರೋಗಿಗಳಿಗೆ ಆಗುತ್ತಿರುವ ಆರ್ಥಿಕ ಹೊರೆಯನ್ನು ತಪ್ಪಿಸಲು ಸರ್ಕಾರವು ರೂಪಿಸಿರುವ ತುರ್ತು ಕಾರ್ಯಯೋಜನೆಗಳೇನು? | |

**ಟೆಂಡರ್ ಪ್ರಕ್ರಿಯೆ ವಿವರ**

| ಕ್ರ.ಸಂ | ವಿವರಣೆ | ಔಷಧಿಗಳ ಸಂಖ್ಯೆ |
|---|---|---|
| 1. | KSMSCL ಮೂಲಕ ಫ್ಲೋಟ್ ಮಾಡಿದ ಟೆಂಡರ್‌ಗಳು (ದಿನಾಂಕ 25.11.25 ರಂತೆ): | 496 Drugs |
| 2. | ವಿತರಿಸಲಾದ NOA ಗಳ ಒಟ್ಟು ಸಂಖ್ಯೆ: | 155 Drugs |
| 3. | ವಿತರಿಸಲಾದ PO ಗಳ ಒಟ್ಟು ಸಂಖ್ಯೆ: | 77 Drugs |
| 4. | ಟೆಂಡರ್ ಪ್ರಕ್ರಿಯೆಯಲ್ಲಿ ವಿವಿಧ ಹಂತಗಳಲ್ಲಿ ಇರುವ ಔಷಧಿಗಳು | 216 Drugs |
| 5. | ಮರುಟೆಂಡರ್ ಮಾಡಬೇಕಾಗಿರುವ ಔಷಧಗಳು | 125 Drugs |

125 ಔಷಧಿಗಳಿಗೆ Zero ಮತ್ತು Non Responsive ಬಿಡ್ ಸ್ವೀಕೃತಿಯಾಗಿದ್ದು, Potential ಬಿಡ್ದಾರರೊಂದಿಗೆ ಸಂಧಾನ ನಡೆಸಿ, ಔಷಧಗಳನ್ನು ಮರುಟೆಂಡರ್ ಆಹ್ವಾನಿಸಲು ಕ್ರಮಕೈಗೊಳ್ಳಲಾಗುತ್ತಿದೆ.

**ಟೆಂಡರ್ ಪ್ರಕ್ರಿಯೆಯನ್ನು ವೇಗಗೊಳಿಸಲು** ನಾಲ್ಕು ಟೆಂಡರ್ ಮೌಲ್ಯಮಾಪನ ತಂಡಗಳನ್ನು ರಚಿಸಲಾಗಿದ್ದು, ಮೌಲ್ಯಮಾಪನ ಪ್ರಕ್ರಿಯೆ ತ್ವರಿತಗೊಳಿಸಲಾಗುತ್ತಿದೆ.

**ಖರೀದಿ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ** ರೋಗಿಗಳ ಚಿಕಿತ್ಸೆಯಲ್ಲಿ ಯಾವುದೇ ವ್ಯತ್ಯಯ ಉಂಟಾಗದಂತೆ ಸರ್ಕಾರದ ಆದೇಶದನ್ವಯ ಸ್ಥಳೀಯ ಔಷಧ ಖರೀದಿಗೆ KSMSCL ಬ್ಯಾಂಕ್ ಖಾತೆಯಲ್ಲಿ ಲಭ್ಯವಿರುವ ರೂ.30 ಕೋಟಿ ಮೊತ್ತವನ್ನು ಆರೋಗ್ಯ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗಿದೆ.

ಆರೋಗ್ಯ ಸಂಸ್ಥೆಗಳಲ್ಲಿ ಲಭ್ಯವಿಲ್ಲದ ಔಷಧಿಗಳನ್ನು ತಮ್ಮ ಮಟ್ಟದಲ್ಲಿ ರಾಷ್ಟ್ರೀಯ ಉಚಿತ ಸೇವೆಗಳ ಕಾರ್ಯಕ್ರಮ (NFDS), AB-ArK/ARS ಹಾಗೂ 15ನೇ ಹಣಕಾಸು ಆಯೋಗದ ಅನುದಾನಗಳಿಂದ, ನಿಯಮಾನುಸಾರ ಮತ್ತು ಸಂಬಂಧಿತ ಪ್ರಾಧಿಕಾರದ ಅನುಮೋದನೆಯೊಂದಿಗೆ ಸ್ಥಳೀಯವಾಗಿ ಖರೀದಿಸಲು ಅವಕಾಶ ನೀಡಲಾಗಿದೆ. ಅಗತ್ಯವಿರುವ ಔಷಧಿಗಳ ಲಭ್ಯತೆಗಾಗಿ ಆರೋಗ್ಯ ಸಂಸ್ಥೆಗಳು ಈ ಅನುದಾನಗಳಿಂದ ಖರೀದಿ ಮಾಡುವ ಮೂಲಕ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಆರೋಗ್ಯ ಸಂಸ್ಥೆಗಳು ಅಗತ್ಯವಿರುವ ಔಷಧಿಗಳನ್ನು Government e-Marketplace (GeM) ಮೂಲಕ ನೇರ ಖರೀದಿ

ಮಾಡಲು ಅವಕಾಶ ಕಲ್ಪಿಸಲಾಗಿದೆ.

**ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಿಗಳ ಲಭ್ಯತೆಗಾಗಿ:**

- ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಆರೋಗ್ಯ ಸಂಸ್ಥೆಗಳಲ್ಲಿ ಔಷಧ ಪೂರೈಕೆಯಲ್ಲಿ ಯಾವುದೇ ವ್ಯತ್ಯಯ ಉಂಟಾಗದಂತೆ ಮಧ್ಯಂತರ ಕ್ರಮಗಳನ್ನು ಕೈಗೊಳ್ಳಲಾಗಿದೆ. ಇದರ ಭಾಗವಾಗಿ KSMSCL ಬ್ಯಾಂಕ್ ಖಾತೆಯಲ್ಲಿ ಲಭ್ಯವಿರುವ ರೂ. 30 ಕೋಟಿ ಮೊತ್ತವನ್ನು SAST ಗೆ ಬಿಡುಗಡೆ ಮಾಡಲಾಗಿದ್ದು, ಅದನ್ನು ಆರೋಗ್ಯ ಸಂಸ್ಥೆಗಳಿಗೆ ಮರು ಬಿಡುಗಡೆ ಮಾಡುವ ಮೂಲಕ ತುರ್ತು ಅವಶ್ಯಕತೆಗಳಿಗೆ ಅಗತ್ಯ ಔಷಧಿಗಳನ್ನು ಸ್ಥಳೀಯವಾಗಿ ಖರೀದಿಸಲು ಅವಕಾಶ ಕಲ್ಪಿಸಲಾಗಿದೆ.
- ಆರೋಗ್ಯ ಸಂಸ್ಥೆಗಳಲ್ಲಿ ಲಭ್ಯವಿಲ್ಲದ ಔಷಧಿಗಳನ್ನು ತಮ್ಮ ಮಟ್ಟದಲ್ಲಿ ರಾಷ್ಟ್ರೀಯ ಉಚಿತ ಸೇವೆಗಳ ಕಾರ್ಯಕ್ರಮ (NFDS), AB-ArK/ARS ಹಾಗೂ 15ನೇ ಹಣಕಾಸು ಆಯೋಗದ ಅನುದಾನಗಳಿಂದ, ನಿಯಮಾನುಸಾರ ಮತ್ತು ಸಂಬಂಧಿತ ಪ್ರಾಧಿಕಾರದ ಅನುಮೋದನೆಯೊಂದಿಗೆ ಸ್ಥಳೀಯವಾಗಿ ಖರೀದಿಸಲು ಅವಕಾಶ ನೀಡಲಾಗಿದೆ. ಅಗತ್ಯವಿರುವ ಔಷಧಿಗಳ ಲಭ್ಯತೆಗಾಗಿ ಆರೋಗ್ಯ ಸಂಸ್ಥೆಗಳು ಈ ಅನುದಾನಗಳಿಂದ ಖರೀದಿ ಮಾಡುವ ಮೂಲಕ ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಿವೆ.
- ಇದಲ್ಲದೆ, ಆರೋಗ್ಯ ಸಂಸ್ಥೆಗಳು ಅಗತ್ಯವಿರುವ ಔಷಧಿಗಳನ್ನು Government e-Marketplace (GeM) ಪೋರ್ಟಲ್ ಮೂಲಕವೂ ಖರೀದಿಸಲು ಅವಕಾಶ ಕಲ್ಪಿಸಲಾಗಿದೆ, ಇದರಿಂದ ತುರ್ತು ಅವಶ್ಯಕತೆಗಳಿಗೆ ಔಷಧಿಗಳನ್ನು ತ್ವರಿತವಾಗಿ ಪಡೆಯಲು ಸಹಾಯವಾಗುತ್ತದೆ.
- ಟೆಂಡರ್ ಪ್ರಕ್ರಿಯೆಯನ್ನು ವೇಗಗೊಳಿಸಲು ನಾಲ್ಕು ಟೆಂಡರ್ ಮೌಲ್ಯಮಾಪನ ತಂಡಗಳನ್ನು ರಚಿಸಲಾಗಿದ್ದು, ಮೌಲ್ಯಮಾಪನ ಪ್ರಕ್ರಿಯೆ ತ್ವರಿತಗೊಳಿಸಲಾಗುತ್ತಿದೆ.
- 2025 ನಲ್ಲಿ ಕೆ.ಎ.ಪಿ.ಎಲ್. ಸಂಸ್ಥೆಯಿಂದ ಸುಮಾರು 30 ಔಷಧಗಳನ್ನು 4G ಮೂಲಕ ಖರೀದಿಸಿ ಆರೋಗ್ಯ ಸಂಸ್ಥೆಗಳಿಗೆ ನೀಡಲಾಗಿರುತ್ತದೆ. ಇದೇ ರೀತಿಯಲ್ಲಿ PHC/CHC/TH ಮಟ್ಟದ ಸರ್ಕಾರಿ ಆರೋಗ್ಯ ಸಂಸ್ಥೆಗಳಿಗೆ ಅಗತ್ಯವಿರುವ ಸುಮಾರು 18 ಅತ್ಯವಶ್ಯಕ ಔಷಧಿಗಳನ್ನು ಗುರುತಿಸಲಾಗಿದ್ದು, ಅವುಗಳ ಉಗ್ರಾಣ ಮಟ್ಟದ ಸಂಗ್ರಹ ಕಡಿಮೆಯಾಗಿದೆ ಹಾಗೂ ಅವುಗಳಿಗೆ ಸಂಬಂಧಿಸಿದ ಟೆಂಡರ್ ಪ್ರಕ್ರಿಯೆ ಮೌಲ್ಯಮಾಪನ ಹಂತದಲ್ಲಿದೆ. ಈ ಔಷಧಿಗಳು ಕರ್ನಾಟಕ ಆಂಟಿಬಯೋಟಿಕ್ಸ್ ಅಂಡ್ ಫಾರ್ಮಾಸ್ಯುಟಿಕಲ್ಸ್ ಲಿಮಿಟೆಡ್ (Karnataka Antibiotics and Pharmaceuticals Limited – KAPL) ಸಂಸ್ಥೆಯಲ್ಲಿ ತಕ್ಷಣ

| | | |
|---|---|---|
| | | ಲಭ್ಯವಿರುವುದರಿಂದ, ಅವುಗಳಲ್ಲಿ ಅಗತ್ಯವಿರುವ ಎರಡು ತಿಂಗಳ ಪ್ರಮಾಣವನ್ನು ಖರೀದಿಸಲು 4G ವಿನಾಯಿತಿ ಪಡೆಯುವ ಮೂಲಕ ಖರೀದಿ ಪ್ರಕ್ರಿಯೆ ಕೈಗೊಳ್ಳಲಾಗುತ್ತಿದೆ, ಇದರಿಂದ ಅವುಗಳನ್ನು ಆರೋಗ್ಯ ಸಂಸ್ಥೆಗಳಿಗೆ ತಕ್ಷಣ ಪೂರೈಕೆ ಮಾಡಲು ಕ್ರಮವಹಿಸಲಾಗಿರುತ್ತದೆ. |

**ಸಂಖ್ಯೆ: ಆಕುಕ 34 ಎಸ್.ಟಿ.ಕ್ಯೂ. 2026**

**( ದಿನೇಶ್ ಗುಂಡೂರಾವ್ )**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

# Annexure-1

## Number of Drugs issued to Kalayana Karnataka district's Health facilities from 2023 to 2026

| District Name | InstituteType | 2023-24 | | 2024-25 | | 2025-26 (Upto 15-Mar-26) | |
|---|---|---|---|---|---|---|---|
| | | No. Of Drugs | Values (Rs) | No. Of Drugs | Values (Rs) | No. Of Drugs | Values (Rs) |
| BALLARI | CHC | 291 | 1,28,06,117 | 368 | 2,20,35,600 | 254 | 87,94,880 |
| | DLH | 259 | 2,78,41,131 | 327 | 2,64,00,466 | 260 | 2,65,25,912 |
| | PHC | 280 | 1,75,29,118 | 355 | 4,69,54,540 | 251 | 2,38,86,715 |
| | TLH | 198 | 82,12,679 | 308 | 1,09,84,919 | 184 | 48,52,725 |
| **BALLARI Total** | | **378** | **6,63,89,047** | **484** | **10,63,75,526** | **375** | **6,40,60,232** |
| BIDAR | CHC | 325 | 1,58,41,967 | 384 | 1,51,96,772 | 274 | 93,16,804 |
| | PHC | 307 | 1,88,11,295 | 375 | 2,23,29,398 | 256 | 1,63,29,413 |
| | TLH | 361 | 1,50,64,957 | 442 | 1,84,21,669 | 274 | 97,18,528 |
| **BIDAR Total** | | **394** | **4,97,18,221** | **475** | **5,59,47,840** | **335** | **3,53,64,745** |
| KALABURGI | CHC | 314 | 1,74,45,823 | 389 | 2,37,64,385 | 269 | 1,16,39,308 |
| | PHC | 316 | 3,62,20,605 | 386 | 5,75,03,349 | 250 | 2,91,01,918 |
| | TLH | 363 | 3,45,62,795 | 467 | 4,68,31,765 | 297 | 3,65,87,478 |
| **KALABURGI Total** | | **384** | **8,82,29,224** | **489** | **12,80,99,500** | **320** | **7,73,28,704** |
| KOPPAL | CHC | 348 | 2,19,14,974 | 429 | 2,59,43,142 | 323 | 1,34,19,398 |
| | PHC | 328 | 2,60,58,168 | 373 | 3,70,09,669 | 324 | 3,34,99,704 |
| | TLH | 381 | 2,49,53,782 | 450 | 2,88,76,141 | 346 | 1,69,68,702 |
| **KOPPAL Total** | | **410** | **7,29,26,925** | **484** | **9,18,28,953** | **421** | **6,38,87,804** |
| RAICHUR | CHC | 314 | 90,91,063 | 385 | 1,14,35,192 | 300 | 72,19,353 |
| | PHC | 328 | 3,21,50,429 | 403 | 3,83,38,397 | 326 | 3,26,31,536 |
| | TLH | 356 | 1,80,26,164 | 463 | 2,42,74,648 | 354 | 1,65,10,303 |
| **RAICHUR Total** | | **384** | **5,92,67,657** | **496** | **7,40,48,238** | **408** | **5,63,61,192** |
| VIJAYANAGARA | CHC | 275 | 1,44,86,769 | 369 | 1,83,22,314 | 217 | 82,46,147 |
| | PHC | 271 | 3,15,87,245 | 348 | 4,99,90,492 | 249 | 2,51,76,586 |
| | TLH | 355 | 2,94,40,460 | 456 | 3,43,87,565 | 274 | 2,12,72,561 |
| **VIJAYANAGARA Total** | | **376** | **7,55,14,475** | **488** | **10,27,00,373** | **326** | **5,46,95,295** |
| YADGIRI | CHC | 268 | 48,21,368 | 382 | 77,18,129 | 229 | 45,61,036 |
| | DLH | 312 | 1,04,14,586 | 293 | 79,26,144 | 8 | 40,08,687 |
| | PHC | 325 | 1,43,32,351 | 383 | 2,05,04,193 | 242 | 1,04,31,186 |
| | TLH | 313 | 87,46,789 | 397 | 1,10,26,038 | 270 | 55,08,066 |
| YADGIRI **Total** | | **397** | **3,83,15,095** | **500** | **4,71,74,505** | **324** | **2,45,08,976** |